## ಪಾಠ - ೩

## ನಮ್ಮ ಮಾತು ಕೇಳಿ

ಮೌಲ್ಯ: “ದಯೆಯಿರಲಿ ಸಕಲ ಪ್ರಾಣಿಗಳಲ್ಲಿ”

---

### ಪದಗಳ ಅರ್ಥ

1.ಅಂಚು - ಕೊನೆ
2.ಅಧಿಪತಿ - ನಾಯಕ
3.ತಾಣ - ಸ್ಥಳ
4.ಫಲಕ - ವಿವರ ಬರೆದು ಹಾಕುವ ಹಲಗೆ
5.ಮುನ್ನಡೆ - ಪ್ರಗತಿ

---

### ಅಭ್ಯಾಸ

ಅ.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧.ಕಾಡಿನ ಅಧಿಪತಿ ಯಾರು?
ಉ: ಕಾಡಿನ ಅಧಿಪತಿ ಆನೆ

---

೨.ಆನೆಯು ಯಾವುದರಲ್ಲಿ ವಿವರ ಬರೆದು ತರಲು
ಸೂಚನೆ ನೀಡಿತ್ತು?
ಉ: ಆನೆಯು ಫಲಕದಲ್ಲಿ ವಿವರ ಬರೆದು ತರಲು
ಸೂಚನೆ ನೀಡಿತ್ತು.

---

೩.’ಮನುಷ್ಯರು ಕಡಿಮೆ ಆಹಾರ ನೀಡುತ್ತಾರೆ’ ಎಂದು
ದೂರು ಬರೆದವರು ಯಾರು?
ಉ: ಮನುಷ್ಯರು ಕಡಿಮೆ ಆಹಾರ ನೀಡುತ್ತಾರೆ' ಎಂದು
ದೂರು ಬರೆದವರು ಎತ್ತು.

---

೪.’ಕಾಡು ನಿಮಗು ಬೇಕು’ ಎಂದು ಎಚ್ಚರಿಸಿದವರು ಯಾರು?
ಉ: ಕಾಡು ನಿಮಗು ಬೇಕು ಎಂದು ಎಚ್ಚರಿಸಿದವರು ಜಿಂಕೆ.

---

೫.’ಮದ್ದು ಗುಂಡುಗಳನ್ನು ಸಿಡಿಸಬೇಡಿ’ ಎಂದು ಹೇಳಿದವರು ಯಾರು?
ಉ: ಮದ್ದು ಗುಂಡು ಸಿಡಿಸಬೇಡಿ ಎಂದು ಹೇಳಿದವರು ಮಂಗ.

---

ಆ.ಕೆಳಗಿನ ಪ್ರಶ್ನೆಗಳಿಗೆ ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧.ಎತ್ತು ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?
ಉ: ಎತ್ತು ಹಿಡಿದ ಫಲಕದಲ್ಲಿ ನಮ್ಮನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತೀರಿ.
ಕಡಿಮೆ ಆಹಾರ ನೀಡುತ್ತೀರಿ. ನಮ್ಮ ಸೇವೆ ಬೇಕು, ನಾವು ಮಾತ್ರ ಬೇಡ ಅಲ್ಲವೆ?
ನಮ್ಮ ಸೇವೆಯನ್ನು ಮರೆಯದಿರಿ. “ದಯೆಯಿರಲಿ ಸಕಲ ಪ್ರಾಣಿಗಳಲ್ಲಿ”
ಎಂದು ಬರೆದಿತ್ತು.

---

೨.ಜಿಂಕೆ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?
ಉ: ಜಿಂಕೆ ಹಿಡಿದ ಫಲಕದಲ್ಲಿ “ನಮ್ಮ ಬದುಕಿನ ಆಧಾರತಾಣ ಕಾಡು, ಅದನ್ನು
ನಾಶ ಮಾಡುತ್ತಿದ್ದೀರಿ ನಮಗೆ ತಿನ್ನಲು ಹುಲ್ಲಿಲ್ಲ, ಮಲಗಲು ಮರದ ನೆರಳಿಲ್ಲ,
ಕಾಡು ನಿಮಗೂ ಬೇಕು ನಮಗು ಬೇಕು” “ನಮ್ಮನ್ನು ಉಳಿಸಿರಿ, ನೀವು ತಿಳಿಯಿರಿ”
ಎಂದು ಬರೆದಿತ್ತು.

---

೩.ಆಮೆ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?
ಉ: ಆಮೆ ಹಿಡಿದ ಫಲಕದಲ್ಲಿ “ನೀರು ಅಮೂಲ್ಯ ಸಂಪತ್ತು ಅದನ್ನು
ಹಾಳು ಮಾಡುತ್ತಿದ್ದಿರಿ. ಕಸ ಕಡ್ಡಿ ಹಾಕಿ ಕಲ್ಮಷಗೊಳಿಸುತ್ತಿದ್ದೀರಿ, ನಮಗೆ

ನೀರಿನಲ್ಲಿರಲು ಕಷ್ಟವಾಗುತ್ತದೆ ನೀರು ನಮ್ಮೆಲ್ಲರ ಜೀವ" "ನೀರನ್ನು ದುರ್ಬಳಕೆ ಮಾಡಬೇಡಿ ಕಲುಷಿತಗೊಳಿಸಬೇಡಿ. ಎಂದು ಬರೆದಿತ್ತು.

---

೪.ಕರಡಿ ಹಿಡಿದ ಫಲಕದಲ್ಲಿ ಏನೆಂದು ಬರೆದಿತ್ತು?

ಉ: ಕರಡಿ ಹಿಡಿದ ಫಲಕದಲ್ಲಿ "ಎಲ್ಲವನ್ನೂ ನೀವೇ ತಿನ್ನುತ್ತೀರಿ. ತಿಂದು ಹೆಚ್ಚಾಗಿ ಹಾಳು ಮಾಡುತ್ತೀರಿ. ನಮ್ಮ ಹೊಟ್ಟೆ ಹಸಿವಿನ ಬಗ್ಗೆ ನೀವು ಗಮನಿಸುವುದಿಲ್ಲ ನಮಗೇನೂ ಉಳಿಸುವುದಿಲ್ಲ" "ನೀವೂ ತಿನ್ನಿ ನಮಗೂ ತಿನ್ನಲು ಬಿಡಿ" ಎಂದು ಬರೆದಿತ್ತು.

---

ಇ.ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿ ಮಾಡಿರಿ.

೧.ಆನೆಯು ಎಲ್ಲ ಪ್ರಾಣಿಗಳಿಂದಲೂ ಮೆಚ್ಚುಗೆಯನ್ನು ಗಳಿಸಿತ್ತು.

---

೨.ಪ್ರಾಣಿಗಳು ಈ ದಿನದ ಸಭೆಗೆ ಸಿದ್ಧವಾಗಿ ಬಂದಿದ್ದವು.

---

೩.ಎಲ್ಲರ ಕುರಿತಾಗಿಯೂ ಈ ರೀತಿಯ ಆಕ್ರೋಶ ಸಲ್ಲದು.

---

೪.ಇವುಗಳನ್ನು ಇನ್ನೊಮ್ಮೆ ಪರಿಶೀಲಿಸಿ ಚರ್ಚಿಸೋಣ.

---

೫.ನಮ್ಮನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತೀರಿ ಎಂದು ಎತ್ತು ಹೇಳಿತು.

---

ಉಕ್ತಲೇಖನ

1.ಎತ್ತು
2.ಜಿಂಕೆ
3.ಫಲಕ
4.ಮನುಷ್ಯ
5.ಪ್ರಾಣಿ
6.ರೈತ
7.ಉಪೇಕ್ಷೆ
8.ತೊಂದರೆ
9.ಪಟಾಕಿ
10.ಕಲ್ಮಷ

---